ಬಸವ ಕಲ್ಯಾಣದಲ್ಲಿ ಸಹಾಯಕ ಪ್ರದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಸ್ಥಾಪನೆ

3026 - ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಬಸವ ಕಲ್ಯಾಣದಲ್ಲಿ ಅತೀ ಹೆಚ್ಚಿನ ಲಾರಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಇಲ್ಲಿ ಇರುವ ಅಧಿಕ ಲಾರಿಗಳ ಸಂಖ್ಯೆಗಳನ್ನು ಗಮನಿಸಿ ಒಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಪ್ರಾರಂಭಿಸುವುದು ಅಗತ್ಯವಿದೆಯೇ? ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು? ಇದರಿಂದ ಹೊರ ರಾಜ್ಯಗಳಿಗೆ ಸೋರಿ ಹೋಗುತ್ತಿರುವ ಆದಾಯವನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲವೇ?*

3) *ಒಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯನ್ನು ತೆರೆಯಲು ಸರ್ಕಾರ ಹಾಕಿಕೊಂಡಿರುವ ಮಾನದಂಡವೇನು?*

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಈಗಾಗಲೇ ಬೀದರ್ ಜಿಲ್ಲೆಯಲ್ಲಿ ಬೀದರ್ ಮತ್ತು ಭಾಲ್ಕಿಯಲ್ಲಿ ಎರಡು ಕಛೇರಿಗಳು ಅಸ್ತಿತ್ವದಲ್ಲಿವೆ. ಬಸವ ಕಲ್ಯಾಣದಲ್ಲಿ ಕಛೇರಿ ಪ್ರಾರಂಭಿಸಲು ಸರ್ಕಾರ ಪರಿಶೀಲಿಸುವುದು. ಬಸವ ಕಲ್ಯಾಣದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿ ಇಲ್ಲದ ಕಾರಣದಿಂದಾಗಿಯೇ ಯಾವುದೇ ಆದಾಯ ಹೊರ ರಾಜ್ಯಗಳಿಗೆ ಸೋರಿ ಹೋಗುತ್ತಿಲ್ಲ.

3) ಉಪ ವಿಭಾಗ ಹಂತದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ ತೆರೆಯಲು 8,000 ರಿಂದ 20,000ವರೆಗೆ ವಾಹನಗಳ ಸಂಖ್ಯೆ ಇರಬೇಕು ಮತ್ತು ಒಂದೂವರೆ ಕೋಟಿ ರೂಪಾಯಿಗಳ ವಾರ್ಷಿಕ ರಾಜಸ್ವ ಸಂಗ್ರಹಣೆಯ ಮನದಂಡ ಹಾಕಿಕೊಳ್ಳಲಾಗಿದೆ.

ತೋಟಗಾರಿಕಾ ಇಲಾಖೆಯಲ್ಲಿರುವ ನೌಕರರ ಸಂಖ್ಯೆ

3027 - ಶ್ರೀ ನೀಲಕಂಠಪ್ಪ ಬಿ.ಆರ್ (ತರೀಕೆರೆ) : ಮಾನ್ಯ ತೋಟಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ತೋಟಗಾರಿಕಾ ಇಲಾಖೆಯಲ್ಲಿರುವ ಒಟ್ಟು ನೌಕರರ ಸಂಖ್ಯೆ ಎಷ್ಟು?*

ಆ) *ಇಲ್ಲಿಯವರೆಗೆ ಈಗ ಅಮಾನತ್ತಿನಲ್ಲಿರುವ ನೌಕರರ ಸಂಖ್ಯೆ ಹಾಗೂ ವಿವರ ನೀಡುವುದು?*

ಇ) *ಅಮಾನತ್ತಿನಲ್ಲಿರುವ ನೌಕರರು ಯಾವ್ಯಾವ ಪ್ರಕರಣಗಳಲ್ಲಿ ಅಮಾನತ್ತಿನಲ್ಲಿದ್ದಾರೆ?*

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಸಮೂಹ - ಎ 192

ಸಮೂಹ - ಬಿ 511

ಸಮೂಹ - ಸಿ 1582

ಸಮೂಹ - ಡಿ 1939

ಒಟ್ಟು **4224**

2) ಇಲ್ಲಿಯವರೆಗೆ ಕೆಳಕಂಡಂತೆ ನೌಕರರು ಅಮಾನತ್ತಿನಲ್ಲಿದ್ದಾರೆ.

ಸಮೂಹ-ಎ	1
ಸಮೂಹ-ಬಿ	3
ಸಮೂಹ-ಸಿ	4
ಸಮೂಹ-ಡಿ	6
ಒಟ್ಟು	**14**

3) ಈ ಬಗ್ಗೆ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

1)	ಕ್ರಿಮಿನಲ್ ಆರೋಪಗಳ ಬಗ್ಗೆ	9
2)	ಹಣ ದುರುಪಯೋಗ	2
3)	ವರದಕ್ಷಿಣೆ ಸಾವು (ಕ್ರಿಮಿನಲ್ ಆರೋಪ)	1
4)	ಗಂಭೀರ ಕರ್ತವ್ಯಲೋಪ	1
5)	ಅನಧಿಕೃತ ಗೈರು ಹಾಜರಿ	1

ಅನುಬಂಧ

ಕ್ರ. ಸಂ.	ಅಮಾನತ್ತಿನಲ್ಲಿರುವ ಅಧಿಕಾರಿ: ನೌಕರರ ಹೆಸರು	ಅಮಾನತ್ತಿನ ದಿನಾಂಕ	ಅಮಾನತ್ತಿಗೆ ಕಾರಣ
ಶ್ರೀಯುತರಾದ:			
1)	ವಿ.ಬಿ. ಚೌದರಿ, ತೋಟಗಾರಿಕೆ ಜಂಟಿ ನಿರ್ದೇಶಕರು ಗುಲ್ಬರ್ಗಾ.	01-08-1997	ಗುಲ್ಬರ್ಗಾ ಜಿಲ್ಲೆಯ ನಾರಾಯಣ ಪುರ ತೋಟಗಾರಿಕೆ ಕ್ಷೇತ್ರದಲ್ಲಿ 5.00 ಕೋಟಿ ರೂಪಾಯಿಗಳ ಹಗರಣ.

ಕ್ರ. ಸಂ.	ಅಮಾನತ್ತಿನಲ್ಲಿರುವ ಅಧಿಕಾರಿ: ನೌಕರರ ಹೆಸರು	ಅಮಾನತ್ತಿನ ದಿನಾಂಕ	ಅಮಾನತ್ತಿಗೆ ಕಾರಣ
	" ಬಿ " ವರ್ಗದ ಅಧಿಕಾರಿಗಳು :		
2)	ಪಂಡಿತನೂಲಾ, ಸಹಾಯಕ ತೋಟಗಾರಿಕೆ ಅಧಿಕಾರಿ, ನಾರಾಯಣಪುರ, ಗುಲಬರ್ಗಾ.	01-08-1997	ಗುಲ್ಬಾರ್ಗಾ ಜಿಲ್ಲೆಯ ನಾರಾಯಣ ಪುರ ತೋಟಗಾರಿಕೆ ಕ್ಷೇತ್ರದಲ್ಲಿ 5.00 ಕೋಟಿ ರೂಪಾಯಿಗಳ ಹಗರಣ.
3)	ಸಿದ್ದಪ್ಪ, ಕೇಂದ್ರ ಕಛೇರಿ ಸಹಾಯಕರು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ಕಾರವಾರ.	30-3-2000	ರೇಕುಲಗಿ ತೋಟಗಾರಿಕೆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ, ದಿನಗೂಲಿ ನೌಕರರಿಗೆ ಸಂಬಂಧಿಸಿ ದಂತೆ ತಪ್ಪು ಮಾಹಿತಿ ನೀಡಿರುವುದು.
4)	ಜಿ. ಮುನಿರತ್ನಯ್ಯ ಸಹಾಯಕ ತೋಟಗಾರಿಕೆ ಅಧಿಕಾರಿ.	02-05-2000 ರಿಂದ ಅನ್ವಯ ವಾಗುವಂತೆ.	ಕ್ರಿಮಿನಲ್ ಮೊಕದ್ದಮೆಗೆ ಹಾಜರಾಗ ದಿದ್ದ ಬಗ್ಗೆ ದಸ್ತಗಿರಿಯಾಗಿ ಬಂಧನ ದಲ್ಲಿರುವ ಬಗ್ಗೆ.
	" ಸಿ " ವರ್ಗದ ಅಧಿಕಾರಿಗಳು :		
5)	ಬೇಲೂರೇಗೌಡ, ತೋಟಗಾರಿಕೆ ಸಹಾಯಕರು, ಹಾರಂಗಿ.	11-1999	ಕ್ರಿಮಿನಲ್ ಪ್ರಕರಣ (ಕೊಲೆಯ ಆರೋಪವಿದೆ)
6)	ಜಯಪ್ರಕಾಶ್, ದ್ವಿ.ದ.ಸ. ಕಬ್ಬನ್‌ಪಾರ್ಕ್.	05-2000	ಕ್ರಿಮಿನಲ್ ಆರೋಪ ಬಗ್ಗೆ.
7)	ಶಿವಾನಂದಯ್ಯ, ದ್ವಿ.ದ.ಸ. ಲಾಲ್‌ಬಾಗ್, ಸಸ್ಯತೋಟ.	29-08-2000	ಕ್ರಿಮಿನಲ್ ಆರೋಪದ ಬಗ್ಗೆ (ಹಣ ದುರುಪಯೋಗ)
8)	ಸಂಪಂಗಪ್ಪ, ಪ್ರ.ದ.ಸ. ಲಾಲ್‌ಬಾಗ್, ಸಸ್ಯತೋಟ.	29-08-2000	ಕ್ರಿಮಿನಲ್ ಆರೋಪದ ಬಗ್ಗೆ (ಹಣ ದುರುಪಯೋಗ)
	" ಡಿ " ವರ್ಗದ ಅಧಿಕಾರಿಗಳು :		
9)	ಚನ್ನರಂಗಯ್ಯ, ತೋಟಗಾರ, ಮಾಗಡಿ.	15-11-1996	ಕ್ರಿಮಿನಲ್ ಆರೋಪದ ಬಗ್ಗೆ.

ಕ್ರ. ಸಂ.	ಅಮಾನತ್ತಿನಲ್ಲಿರುವ ಅಧಿಕಾರಿ: ನೌಕರರ ಹೆಸರು	ಅಮಾನತ್ತಿನ ದಿನಾಂಕ	ಅಮಾನತ್ತಿಗೆ ಕಾರಣ
10)	ವೆಂಕೋಬರಾವ್,	08-07-2000 20-01-2000 ರಿಂದ ಅನ್ವಯ ವಾಗುವಂತೆ.	ವರದಕ್ಷಿಣೆಕೊಲೆ ಬಗ್ಗೆ ದಸ್ತಗಿರಿಯಾಗಿರುವ ಬಗ್ಗೆ.
11)	ಹೆಚ್.ಬಿ. ವೆಂಕಟೇಶ್‌ಗೌಡ, ತೋಟಗಾರ, ಹೊಗಳಗೆರೆ.	24-07-2000	ಅನಧಿಕೃತ ಗೈರುಹಾಜರಿ ಬಗ್ಗೆ.
12)	ಕೃಷ್ಣೇಗೌಡ, ಬಿನ್. ಸಣ್ಣೇಗೌಡ.	17-08-2000 25-2-2000 ರಿಂದ ಅನ್ವಯ ವಾಗುವಂತೆ	ಕ್ರಿಮಿನಲ್ ಆರೋಪದ ಮೇರೆಗೆ ದಸ್ತಗಿರಿಯಾದ ಬಗ್ಗೆ.
13)	ವೆಂಕಟೇಶ್, ತೋಟಗಾರ ಜೋಡಿಬೊಮ್ಮಸಂದ್ರ	04-09-2000 09-10-99 ರಿಂದ ಲೇ ಅನ್ವಯ ವಾಗುವಂತೆ.	ಕ್ರಿಮಿನಲ್ ಆರೋಪದ ಮೇಲೆ ದಸ್ತಗಿರಿಯಾದ ಬಗ್ಗೆ.
14)	ಕೃಷ್ಣಪ್ಪ, ತೋಟಗಾರ, ಜೋಡಿವಮ್ಮಸಂದ್ರ.	04-09-2000	ಕ್ರಿಮಿನಲ್ ಆರೋಪದ ಮೇಲೆ.

ತರೀಕೆರೆ ತಾಲ್ಲೂಕನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಚಿಕ್ಕಮಗಳೂರು ವಿಭಾಗಕ್ಕೆ ಸೇರಿಸುವ ಬಗ್ಗೆ

3028 - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕು ಈಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ದಾವಣಗೆರೆ ವಿಭಾಗಕ್ಕೆ ಸೇರಿದೆಯೇ?

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೊಸ ವಿಭಾಗ ಆಗಿರುವುದು ನಿಜವಲ್ಲವೆ?

ಇ) ತರೀಕೆರೆ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆಯಲ್ಲಿರುವುದರಿಂದ, ಆಡಳಿತ ದೃಷ್ಟಿಯಿಂದ ಚಿಕ್ಕಮಗಳೂರು ವಿಭಾಗಕ್ಕೆ ತರೀಕೆರೆ ವಿಭಾಗಗಳನ್ನು ಸೇರಿಸಲು ಕಾನೂನು ತೊಡಕಿದೆಯೇ?